## 1. ಕಬ್ಬು ಬೆಳೆಗೆ ಬೆಂಬಲ ಬೆಲೆ ನೀಡುವ ಬಗ್ಗೆ

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಶಾಸಕರು ಕಮ್ಮು ಪಟ್ಟಿ ಧರಿಸಿ ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿ ಘೋಷಣೆಗಳನ್ನು ಕೂಗಿದರು)

**ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಧಾರವಾಡ ಸೆಂಟ್ರಲ್)**: ಮಾನ್ಯ ಅಧ್ಯಕ್ಷರೆ, ನಿನ್ನೆ ಏನು ದುರಂತ ಆಯಿತು, ರೈತನ ಆತ್ಮಹತ್ಯೆ ಏನು ಆಯಿತು, ರೈತನ ಆತ್ಮಹತ್ಯೆಗೆ ಕಾಂಗ್ರೆಸ್ ಸರ್ಕಾರವೇ ಕಾರಣ. ಅಧಿವೇಶನ ಪ್ರಾರಂಭವಾದಾಗಿನಿಂದ...

(ಗೊಂದಲ)

**ಅಧ್ಯಕ್ಷರು:** ಯಾರಾದರೂ ಒಬ್ಬರು ಹೇಳಿ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ರೈತರ ದುರಂತಕ್ಕೆ ಕಾಂಗ್ರೆಸ್ ಸರ್ಕಾರವೇ ಮುಖ್ಯ ಕಾರಣ. ಮಾನ್ಯ ಮುಖ್ಯಮಂತ್ರಿಗಳ ಬೇಜವಾಬ್ದಾರಿ, ಅವರು ಸರಿಯಾದ ನಿರ್ಣಯವನ್ನು ಸರಿಯಾದ ಸಮಯದಲ್ಲಿ ತೆಗೆದುಕೊಳ್ಳದೆ ಇದ್ದುದರಿಂದ ಇವತ್ತು ಈ ರೀತಿಯಾದ ಒಂದು ಅನಾಹುತವಾಯಿತು 25ನೇ ತಾರೀಖಿನಂದು ಅಧಿವೇಶನ ಪ್ರಾರಂಭವಾದಾಗಿನಿಂದ ಕಬ್ಬಿನ ದರ ನಿಗದಿ ಮಾಡಬೇಕು, ಕಬ್ಬಿನ ಬೆಳೆಗಾರರ ಸಮಸ್ಯೆಗೆ ಸ್ಪಂದನೆ ಮಾಡಬೇಕೆಂದು ಅವತ್ತೇ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅವತ್ತೇ ಸಂಪೂರ್ಣ ಚರ್ಚೆಯಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದರೆ ಒಬ್ಬ ರೈತನ ಜೀವ ಉಳಿಯುತ್ತಿತ್ತು.

(ಭಾರತೀಯ ಜನತಾ ಪಕ್ಷದ ಶಾಸಕರು ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗಿದರು)

(ಗೊಂದಲ)